**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಲಯ**
**ಕನಕಪುರ**

**<u>ಸಿ.ಸಿ.ನಂ.1578/2021</u>**

# <u>ಃ ಆಪಾದನೆ ಃ</u>

ನಾನು ಸುರೇಶ ಅಣ್ಣಪ್ಪ ಸವದಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಕನಕಪುರ, ಆದ ನಾನು

ಶ್ರೀಮತಿ ಗೀತಾ
ಕೋಂ ಬಾಬು
ವಯಸ್ಸು ವರ್ಷಗಳು
ವಾಸಃ ರಂಗನಾಥ ಬಡಾವಣೆ
ಹಾರೋಹಳ್ಳಿ ಗ್ರಾಮ ಮತ್ತು ಹೋಬಳಿ
ಕನಕಪುರ ತಾಲ್ಲೂಕು
ರಾಮನಗರ ಜಿಲ್ಲೆ.

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ಆಪಾದನೆ ಏನೆಂದರೆ ಃ-

ಆರೋಪಿತರಾದ ನೀವು ಪಿರ್ಯಾದುದಾರರಾದ ಶ್ರೀಮತಿ ಶಿವಮ್ಮ ರವರಿಗೆ ನೀಡಬೇಕಾಗಿದ್ದ ರೂ.6,50,000-00 ಸಾಲದ ಮೊತ್ತಕ್ಕೆ ದಿನಾಂಕಃ06.10.2017ರಂದು ಸಿಂಡಿಕೇಟ್ ಬ್ಯಾಂಕ್, ಹಾರೋಹಳ್ಳಿ ಶಾಖೆಯ ರೂ. 6,50,000-00 ಗಳ ನಂ.056735ರ ಒಂದು ಚೆಕ್ಕನ್ನು ಫಿರ್ಯಾದುದಾರರಿಗೆ ನೀಡಿದ್ದು, ಸದರಿ ಚೆಕನ್ನು ಫಿರ್ಯಾದುದಾರರು ನಗದೀಕರಣಕ್ಕಾಗಿ ಕಾರ್ಪೋರೇಷನ್ ಬ್ಯಾಂಕ್, ಹಾರೋಹಳ್ಳಿ ಶಾಖೆಯ ಮುಖಾಂತರ ಹಾಜರುಪಡಿಸಿದಾಗ, ಆರೋಪಿತರಾದ ನಿಮ್ಮ ಖಾತೆಯಲ್ಲಿ **"ಸಾಕಷ್ಟು ಹಣವಿಲ್ಲ"** ಎಂದು ದಿನಾಂಕಃ09.10.2017 ರಂದು ಹಿಂಬರಹ ನೀಡಿದ್ದು, ಆ ಮೂಲಕ ಸದರಿ ಚೆಕ್ಕು ಅಮಾನ್ಯಗೊಂಡು ವಾಪಸ್ಸು ಬಂದಿದ್ದು, ನಂತರ ದಿನಾಂಕಃ 16.10.2017ರಂದು ಫಿರ್ಯಾದಿಯು ತನ್ನ ವಕೀಲರ ಮೂಲಕ ನೋಟಿಸ ನೀಡಿದ್ದು, ಅದು ನಿಮಗೆ ತಲುಪಿದರೂ ಸಹ ನೀವು ಕೊಡಬೇಕಾದ ಚೆಕ್ಕಿನ ಹಣವನ್ನು ಕೊಡದೇ ಇರುವುದರ ಮೂಲಕ ವರ್ಗಾವಣೆಯ

ಲಿಖಿತ ಕಾಯ್ದೆ ಕಲಂ ೧೩೮ ರಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಈ ಮೇಲೆ ತಿಳಿಸಿದ ಆಪಾದನೆಗೆ ನೀವು ಗುರಿಯಾಗಬೇಕೆಂದು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

ಪ್ರಶ್ನೆ (೧) : ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರಃ-

ಪ್ರಶ್ನೆ(೨) : ನೀವು ಸದರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರಃ-

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಕನಕಪುರ**